## ಸುಳ್ಳು ಸಂಬಂಧ ಬೇಕಿಲ್ಲ

ಹೃತಿಕ್ ರೋಷನ್ ಮತ್ತು ಸೂಸೇನ್ ಖಾನ್ ಅಧಿಕೃತವಾಗಿ ವಿಚ್ಛೇದನಗೊಂಡು ಎರಡು ವರ್ಷವಾಗುತ್ತಿದೆ. ಈ ನಡುವೆ ಇಬ್ಬರೂ ಮತ್ತೆ ಬೆಸೆಯುವ ಕುರಿತು, ಬೇರೆ ಬೇರೆ ಮದುವೆಗಳಾಗುವ ಕುರಿತು ಹರಿದಾಡಿದ ಸುದ್ದಿಗಳು ಸಾಕಷ್ಟು. ಆದರೆ ಇಲ್ಲಿಯವರೆಗೂ ಅವುಗಳಲ್ಲಿ ಒಂದೂ ಖಚಿತವಾಗಿಲ್ಲ. ಇಬ್ಬರು ಪುನಃ ಬೆಸೆಯುವ ಸುದ್ದಿಗೆ ಕಾರಣ ಆಗಾಗ್ಗೆ ಜತೆಯಾಗಿ ಕಾಣಿಸಿಕೊಳ್ಳುತ್ತಿರುವುದು. ಇಬ್ಬರೂ ಆಗಾಗ್ಗೆ ಹರಟುತ್ತಾರೆ. ಮಕ್ಕಳಿಗಾಗಿ ಒಟ್ಟಿಗೆ ಸೇರುತ್ತಾರೆ. ಮೊನ್ನೆ ಮೊನ್ನೆ ಕಂಗನಾ ರನೋಟ್ ಜತೆಗಿನ ಇ–ಮೇಲ್ ವಿವಾದ ವೇಳೆ ಸೂಸೇನ್, ಹೃತಿಕ್ ಬೆನ್ನಿಗೆ ನಿಂತಿದ್ದಳು. 'ಇದರರ್ಥ ಮುರಿದ ಸಂಬಂಧವನ್ನು ಮತ್ತೆ ಬೆಸುಗೆ ಹಾಕುತ್ತೇವೆ ಎಂದಲ್ಲ' ಎಂದಿದ್ದಾಳೆ ಸೂಸೇನ್.

'ಇಬ್ಬರೂ ಇನ್ನು ಒಟ್ಟಿಗೆ ಇರಲು ಸಾಧ್ಯವೇ ಇಲ್ಲ ಎಂಬ ಸ್ಥಿತಿಗೆ ತಲುಪಿದ ಬಳಿಕವೇ ದೂರಾಗುವುದು ಒಳ್ಳೆಯದು ಎಂದು ನಿರ್ಧರಿಸಿದ್ದು. ನಾವು ಜಾಗೃತರಾಗಿದ್ದು, ಸುಳ್ಳು ಸಂಬಂಧದೊಂದಿಗೆ ಇರುವುದನ್ನು ನಾವು ಬಯಸುವುದಿಲ್ಲ. ಆದರೆ ನಾವಿಬ್ಬರೂ ಹತ್ತಿರದ ಗೆಳೆಯರು' ಎಂದಿದ್ದಾಳೆ ಆಕೆ.

ಹೃತಿಕ್–ಸೂಸೇನ್‌ಗೆ ರೆಹಾನ್ ಮತ್ತು ಹೃದಾನ್ ಎಂಬ ಎರಡು ಮಕ್ಕಳು. ವಿಚ್ಛೇದನ ಇಬ್ಬರು ಮಕ್ಕಳೊಂದಿಗಿನ ಸಂಬಂಧದ ಮೇಲೆ ಯಾವುದೇ ಪರಿಣಾಮ ಬೀರಿಲ್ಲ ಎನ್ನುತ್ತಾಳೆ ಸೂಸೇನ್. 'ನಾವಿಬ್ಬರೂ ತುಂಬಾ ಹರಟುತ್ತೇವೆ. ಆದರೆ ಎಂದಿಗೂ ಒಟ್ಟಿಗೆ ಸುತ್ತಾಡುವುದಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಮಕ್ಕಳಿಗಾಗಿ ನಾವು ಬದ್ಧರಾಗಿದ್ದೇವೆ. ಪರಸ್ಪರ ಗೌರವ ಹೊಂದಿದ್ದೇವೆ. ಮಕ್ಕಳು ನಮ್ಮೊಟ್ಟಿಗೆ ಇದ್ದಾಗ ಭಿನ್ನಾಭಿಪ್ರಾಯ, ಮನಸ್ತಾಪಗಳನ್ನು ಬದಿಗಿರಿಸಿ ಅವರತ್ತ ಗಮನ ಹರಿಸುವುದೇ ನಮಗೆ ಮುಖ್ಯ' ಎಂದು ವಿಚ್ಛೇದನದ ಬಳಿಕವೂ ಮರೆಯದ ಕರ್ತವ್ಯದ ಕುರಿತು ಹೇಳಿಕೊಂಡಿದ್ದಾಳೆ ಸೂಸೇನ್.





## ರಾಹುಲ್ ಬೋಸ್ ಆ್ಯಕ್ಷನ್-ಕಟ್ ಮಂತ್ರ

ಬಿಟೌನ್ ಮಾತ್ರವಲ್ಲ, ದಕ್ಷಿಣದ ಸಿನಿಮಾಗಳಲ್ಲಿಯೂ ಸದ್ದಿಲ್ಲದೆ ಮಿಂಚು ಹರಿಸುತ್ತಿರುವ ನಟ ರಾಹುಲ್ ಬೋಸ್. ಪ್ರಯೋಗಾತ್ಮಕ ಪಾತ್ರವೆಂದಾಗ ಕೇಳುವ ನಟರ ಹೆಸರುಗಳಲ್ಲಿ ರಾಹುಲ್ ಹೆಸರೂ ಒಂದು. ಖಳನಾಯಕನಾಗಿಯೂ ರಾಹುಲ್ ಖದರ್ ತೋರಿಸಿದ್ದಾನೆ. ಬಣ್ಣ ಹಚ್ಚುವ ಕೆಲಸವನ್ನು ಸಂಭ್ರಮಿಸಿರುವ ರಾಹುಲ್ ಮತ್ತೆ ನಿರ್ದೇಶನದ ಟೊಪ್ಪಿ ಧರಿಸಿದ್ದಾನೆ. 'ಝುಂಕಾರ್ ಬೀಟ್ಸ್', 'ಚಮೇಲಿ', 'ದಿಲ್ ಧಡಕ್ನೆ ದೋ' ಮುಂತಾದ ಚಿತ್ರಗಳಲ್ಲಿ ನಟಿಸಿ ಹೆಸರು ಮಾಡಿದ ರಾಹುಲ್ ಆ್ಯಕ್ಷನ್ ಕಟ್ ಹೇಳಿರುವ ಚಿತ್ರದ ಹೆಸರು 'ಪೂರ್ಣ'. ಶೀರ್ಷಿಕೆಯೇ ಇದೊಂದು ಮಹಿಳಾ ಪ್ರಧಾನ ಚಿತ್ರ ಎಂಬುದನ್ನು ಧ್ವನಿಸುತ್ತಿದೆ. ಈ ಚಿತ್ರ ಮಾಡಿದ್ದೇ ಒಂದು ರೋಮಾಂಚನಕಾರಿ ಅನುಭವ ಎಂದಿದ್ದಾನೆ ರಾಹುಲ್. ಇದರಲ್ಲಿ ತನ್ನ ಅತಿ ಪ್ರೀತಿಯ ಮೂರು ಸಂಗತಿಗಳನ್ನು ಆತ ತಂದಿದ್ದಾನಂತೆ. 'ಸಿನಿಮಾ, ಕ್ರೀಡೆ–ಸಾಹಸ ಮತ್ತು ಮಹಿಳಾ ಸಬಲೀಕರಣ ಇದೇ ಆ ಮೂರು ಅಂಶಗಳು' ಎಂದು ಆತ ವಿವರಿಸಿದ್ದಾನೆ. ಅಂದಹಾಗೆ, ರಾಹುಲ್‌ಗಿದು ಎರಡನೇ ನಿರ್ದೇಶನದ ಸಿನಿಮಾ. 2001ರಲ್ಲಿ 'ಎವರಿಬಡಿ ಸೇಸ್ ಐಯಾಮ್ ಫೈನ್!' ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ ಬಳಿಕ ರಾಹುಲ್ ಮತ್ತೆ ನಿರ್ದೇಶಕನ ಕುರ್ಚಿ ಏರಿರಲಿಲ್ಲ. 2009ರಲ್ಲಿ 'ದಿ ವಿಸ್ಪರರ್ಸ್' ಚಿತ್ರಕ್ಕೆ ಬರಹಗಾರನಾಗಿ ತೊಡಗಿಸಿಕೊಂಡ ನಂತರ ನಿರ್ದೇಶನದ ವಿಭಾಗದಲ್ಲೂ ಕಾಣಿಸಿಕೊಂಡಿರಲಿಲ್ಲ.

'ಪೂರ್ಣ ಚಿತ್ರವನ್ನು ಕಾಲ್ಪನಿಕ ಕಥೆಯಂತೆ ನಾಟಕೀಯವಾಗಿ ಹೆಣೆಯಲು ಸಾಧ್ಯವಿರಲಿಲ್ಲ' ಎನ್ನುವುದು ರಾಹುಲ್ ಅಭಿಪ್ರಾಯ. ಏಕೆಂದರೆ ಇದು ತೆಲಂಗಾಣದ ಮಾಲಾವತ್ ಪೂರ್ಣ ಎಂಬ ಹೆಣ್ಣುಮಗಳ ನೈಜ ಜೀವನಗಾಥೆಯನ್ನು ಆಧರಿಸಿದ ಸಿನಿಮಾ. ಮೌಂಟ್ ಎವರೆಸ್ಟ್ ಏರಿದ ಅತಿ ಕಿರಿಯ ಬಾಲಕಿ ಎಂಬ ಖ್ಯಾತಿ ಗಳಿಸಿದ 13 ವರ್ಷದ ಪೂರ್ಣಳ ಸಾಹಸಗಾಥೆಯನ್ನು ಸಿನಿಮಾಕ್ಕೆ ತಂದಿದ್ದಾನೆ ರಾಹುಲ್. ಇದೊಂದು ಸ್ಫೂರ್ತಿದಾಯಕ ಸಿನಿಮಾ ಎಂದಿದ್ದಾನೆ ರಾಹುಲ್. ಈ ವರ್ಷದ ಅಂತ್ಯದಲ್ಲಿ ಚಿತ್ರ ಬಿಡುಗಡೆ ಮಾಡುವುದು ಆತನ ಗುರಿ.

■ ಅಮಿ